# ಹವಳದ ದಿಬ್ಬಕ್ಕೆ ಕನ್ನ



‘ಆಸ್ಟ್ರೇಲಿಯಾದ ಅಸ್ಮಿತೆ’ ಎಂದೇ ಖ್ಯಾತವಾಗಿರುವ ವಿಶ್ವದ ನೈಸರ್ಗಿಕ ಪಾರಂಪರಿಕ ತಾಣ ಕ್ವೀನ್ಸ್‌ಲ್ಯಾಂಡ್‌ನ ‘ಮಹಾ ಹವಳದ ದಿಬ್ಬ’ (**Great Barrier Reef**) ತನ್ನ ಅಸ್ತಿತ್ವ ಕಳೆದುಕೊಳ್ಳುವ ಭೀತಿಯಲ್ಲಿದೆ. ಭಾರತದ ದೈತ್ಯ ಉದ್ಯಮಿ ಗೌತಮ್ ಅದಾನಿ ಮತ್ತು ಆಸ್ಟ್ರೇಲಿಯಾ ಸರ್ಕಾರ ಎರಡೂ ಸೇರಿ ಈ ಅವಾಂತರ ಸೃಷ್ಟಿಸಿವೆ. ಇಪ್ಪತ್ತು ಶತಕೋಟಿ ಡಾಲರ್ ವೆಚ್ಚದಲ್ಲಿ ಆಸ್ಟ್ರೇಲಿಯಾದ ಅತಿ ದೊಡ್ಡ ಕಲ್ಲಿದ್ದಲು ಗಣಿಯನ್ನು ಪ್ರಾರಂಭಿಸುವ ಅದಾನಿಯ ಪ್ರಸ್ತಾಪಕ್ಕೆ ಕಳೆದ ಜುಲೈನಲ್ಲಿ ಹಸಿರು ನಿಶಾನೆ ನೀಡಿರುವ ಆಸ್ಟ್ರೇಲಿಯಾದ ಸಂಸತ್ತು ಎಂದೆಂದೂ ಸರಿಪಡಿಸಲಾಗದ ದುರಂತಕ್ಕೆ ಶಂಕುಸ್ಥಾಪನೆ ಮಾಡಿ ಪರಿಸರ ಪ್ರೇಮಿಗಳ ತೀವ್ರ ಟೀಕೆಗೊಳಗಾಗಿದೆ.

ಪೂರ್ವ ಹಾಗೂ ಉತ್ತರ ಕರಾವಳಿಯ ಗಲಿಲೀ ಬೇಸಿನ್‌ನ ಕಾರ್ಮೈಖೆಲ್‌ನಲ್ಲಿ ತಲೆ ಎತ್ತಲಿರುವ ತೆರೆದ ಎರಕದ ಕಲ್ಲಿದ್ದಲಿನ ಗಣಿ ಇನ್ನು ಕೆಲವೇ ವರ್ಷಗಳಲ್ಲಿ, ಭೂರಮೆಯ ಆಭರಣವೇ ಆಗಿರುವ ‘ಮಹಾ ಹವಳದ ದಿಬ್ಬ’ವನ್ನು ಮುಂದಿನ ಅರವತ್ತು ವರ್ಷಗಳಲ್ಲಿ ಇಂಚಿಂಚಾಗಿ ಕತ್ತರಿಸಿ ಹಾಕಲಿದೆ. ನೂರಾರು ಕೋಟಿ ಡಾಲರ್ ಹಣ ಮತ್ತು ಒಂದಿಷ್ಟು ಜನರಿಗೆ ಕೆಲಸ ಸಿಗುತ್ತದೆನ್ನುವ ಹಪಹಪಿಗೆ ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಬಿದ್ದಿದ್ದಾರೆ.

## ಕಾರ್ಮೈಖೆಲ್ ಕಲ್ಲಿದ್ದಲು ಗಣಿ

ಆಸ್ಟ್ರೇಲಿಯನ್ನರ ಪಾಲಿಗೆ ಇದು ಅತ್ಯಂತ ದೊಡ್ಡ ಕಲ್ಲಿದ್ದಲಿನ ಗಣಿ. ವಾರ್ಷಿಕ 6 ಕೋಟಿ ಮಿಲಿಯನ್ ಟನ್ ಅದಿರು ಉತ್ಪಾದನೆಯ ಗುರಿ ಹೊಂದಿರುವ ಇದು 60 ವರ್ಷಗಳವರೆಗೆ ನಡೆಯಲಿದೆ. 50 ಕಿ.ಮೀ ಉದ್ದ ಮತ್ತು 447 ಚ.ಕಿ.ಮೀ ವಿಸ್ತೀರ್ಣದಲ್ಲಿ ಹರಡಿಕೊಳ್ಳುವ 6 ತೆರೆದ ಎರಕದ ಗಣಿಗಳು ಮತ್ತು ಐದು ಭೂಗತ ಗಣಿಗಳು 30 ಸಾವಿರ ಹೆಕ್ಟೇರ್ ಪ್ರದೇಶವನ್ನು ಬಗೆದುಹಾಕುತ್ತದೆ. ಒಟ್ಟು 4 ಬಿಲಿಯನ್ ಟನ್‌ನಷ್ಟು ಅದಿರು ಉತ್ಪಾದನೆಯ ಗುರಿ ಹೊಂದಿರುವ ಅದಿರು ಕಂಪನಿ ದಿನಕ್ಕೆ 26 ಸಾವಿರ ಮಿಲಿಯನ್ ಲೀಟರ್‌ನಂತೆ ವಾರ್ಷಿಕ 12 ಬಿಲಿಯನ್ ಲೀಟರ್ ನೀರನ್ನು ಬಳಸಿಕೊಳ್ಳಲಿದೆ. 5 ಬಿಲಿಯನ್ ಟನ್ ಇಂಗಾಲ ಮತ್ತು 200 ಮಿಲಿಯನ್ ಟನ್ ಇಂಗಾಲದ ಡೈ ಆಕ್ಸೈಡ್‌ನ್ನು ಮುಂದಿನ ಆರು ದಶಕಗಳಲ್ಲಿ ವಾತಾವರಣಕ್ಕೆ ಹೊಮ್ಮಿಸುವ ಕಾರ್ಮೈಖೆಲ್ ಗಣಿ ವಾತಾವರಣದ ಬಿಸಿಯನ್ನು ಹೆಚ್ಚಿಸುವುದಲ್ಲದೆ, ಅಪಾರ ಅದಿರಿನ ರಾಡಿಯನ್ನು ಹತ್ತಿರವೇ ಇರುವ ಹವಳದ ದಿಬ್ಬವಿರುವ ಜಾಗಕ್ಕೆ ತಳ್ಳುತ್ತದೆ. ಗಣಿಗಾರಿಕೆಯ ಜಾಗದಿಂದ ಅಬಾಟ್ ಪಾಯಿಂಟ್ ಬಂದರಿಗೆ ಅದಿರನ್ನು ಸಾಗಿಸಲು 400 ಕಿ.ಮೀ. ಉದ್ದದ ರೈಲು ರಸ್ತೆಯನ್ನು ನಿರ್ಮಿಸುವ ಪ್ರಸ್ತಾಪವೂ ಯೋಜನೆಯಲ್ಲಿದ್ದು ಅದರಿಂದ ಅಪಾರ ಪ್ರಮಾಣದ ಪರಿಸರ ನಾಶ ಸಂಭವಿಸಲಿದೆ.

2010ರಲ್ಲಿ ಗಣಿಗಾರಿಕೆಯ ಪ್ರಸ್ತಾಪ ಸಲ್ಲಿಸಿದ್ದ ಅದಾನಿ ಸಮೂಹ 150 ವರ್ಷಗಳ ಅವಧಿಯ ಲೀಸ್ ಕೇಳಿತ್ತು. ಅಂತಿಮವಾಗಿ 60 ವರ್ಷಗಳ ಪರವಾನಿಗೆ ದೊರೆತಿದೆ. 2014ರಲ್ಲಿ ಮೊದಲ ಪರವಾನಿಗೆ ನೀಡಿದ ಪರಿಸರ ಸಚಿವಾಲಯ ಅದಾನಿಯ ಮುಂದೆ 190 ನಿಬಂಧನೆಗಳನ್ನು ವಿಧಿಸಿತ್ತು. ಮ್ಯಾಕೇ ಪ್ರಾಂತ್ಯದ ಒಟ್ಟಾದಾಯಕ್ಕೆ ವಾರ್ಷಿಕ 930 ಮಿಲಿಯನ್ ಹಾಗೂ ಕ್ವೀನ್ಸ್‌ಲ್ಯಾಂಡ್‌ನ ಆರ್ಥಿಕತೆಗೆ 3 ಬಿಲಿಯನ್ ಆಸ್ಟ್ರೇಲಿಯನ್ ಡಾಲರ್ ಹಣ ನಿರೀಕ್ಷಿಸಿದ್ದ ಹಿಂದಿನ ಪ್ರಧಾನಿ ಟೋನಿ ಅಬಾಟ್ ಸಾವಿರಾರು ಜನರಿಗೆ ಉದ್ಯೋಗ ನೀಡುವ ಗಣಿಗಾರಿಕೆ ಒಳ್ಳೆಯದು ಎಂದು ಯೋಜನೆಯನ್ನು ಬೆಂಬಲಿಸಿದ್ದರು. ಉತ್ಪಾದನೆಯಾಗುವ ಕಲ್ಲಿದ್ದಲಿನ ಬಹು ಭಾಗ ಭಾರತಕ್ಕೇ ಆಮದಾಗುತ್ತದೆ ಎಂಬ ಮಾತೂ ಇದೆ.

## ‘ಮಹಾ ಹವಳದ ದಿಬ್ಬ’ಕ್ಕೆ ಕರಗುವ ಭೀತಿ

ಗ್ರೇಟ್ ಬ್ಯಾರಿಯರ್ ರೀಫ್ ಎಂದೇ ಕರೆಯಲ್ಪಡುವ ವಿಶ್ವದ ಅತ್ಯಂತ ದೊಡ್ಡ ಹವಳದ ದಿಬ್ಬ 2300 ಕಿ.ಮೀ. ಉದ್ದ ಮತ್ತು 3,44,000 ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಈ ದಿಬ್ಬದಲ್ಲಿ 2900 ಪ್ರತ್ಯೇಕ ಹವಳದ ದಿಣ್ಣೆಗಳಿವೆ. 75ರಿಂದ 1300 ಮೀಟರ್ ಉದ್ದ ಹರಡಿಕೊಂಡಿರುವ ಈ ಕಿರುದಿಣ್ಣೆಗಳು 900 ದ್ವೀಪಗಲ್ಲಿ ಕಂಡುಬರುತ್ತವೆ. ಸೂಕ್ಷ್ಮಾಣು ಜೀವಿಗಳು ನಿರ್ಮಿಸಿದ ವಿಶ್ವದ ಅನನ್ಯ ಮತ್ತು ಏಕೈಕ ರಚನೆಯಾಗಿರುವ ಹವಳದ ದಿಬ್ಬಗಳು 20 ಸಾವಿರ ವರ್ಷಗಳ ಹಿಂದೆಯೇ ರೂಪುಗೊಂಡಿವೆ.

ಸಮುದ್ರದಲ್ಲಿನ ಬಂಡೆಗಳು, ಬೆಟ್ಟಗಳನ್ನಾಶ್ರಯಿಸುವ ಸೂಕ್ಷ್ಮಾಣು ಜೀವಿಗಳ ಮೊಟ್ಟೆಗಳಿಂದ ಮತ್ತು ಪಾಚಿಗಳ ಕವಲೊಡೆಯುವಿಕೆಯಿಂದ ಜನಿಸುವ ಹವಳಗಳು 3 ಮಿ.ಮೀ.ನಿಂದ 6 ಸೆಂ.ಮೀ.ವರೆಗೆ ಬೆಳೆದು ಹಳದಿ, ಕೆಂಪು, ಹಸಿರು, ಕಂದು ಬಣ್ಣಗಳನ್ನು ಹೊಂದಿ ದೃಷ್ಟಿ ಹರಿಸಿದುದ್ದಕ್ಕೂ ಹವಳದ ಹಾಸುಗೆಯನ್ನೇ ನಿರ್ಮಿಸುತ್ತವೆ. ಬಾಹ್ಯಾಕಾಶದಿಂದಲೂ